

ಹೇರ್‌ಬ್ಯಾಂಡ್, ಕೈಗಳಿಗೆ ಬ್ಯಾಂಡ್, ಕಿವಿಯೋಲೆ, ಸರ ಎಲ್ಲವನ್ನೂ ಮ್ಯಾಚ್ ಮಾಡಿಕೊಂಡರೆ ಸಖತ್ ಲುಕ್ ಕೊಡುತ್ತದೆ.

ಇನ್ನೊಂದು ಕಾಂಬಿನೇಷನ್‌ನಲ್ಲಿ ಬಿಳಿ ಬಣ್ಣದ ಕುರ್ತಾಕ್ಕೆ ಕೇಸರಿ ಬಣ್ಣದ ಲೆಗಿಂಗ್ಸ್ ಅಥವಾ ಆ್ಯಂಕಲ್ ಲೆಂತ್ ಪ್ಯಾಂಟ್ ಧರಿಸಬಹುದು. ಹಸುರು ಬಣ್ಣದ ದುಪಟ್ಟಾ ಹಾಕಿಕೊಂಡರೆ ಚೆನ್ನಾಗಿರುತ್ತದೆ. ಅಲ್ಲದೆ ತ್ರಿವರ್ಣದ ದುಪಟ್ಟಾವೂ ಎದ್ದು ಕಾಣುವಂತಿರುತ್ತದೆ. ಇದಕ್ಕೆ ಸರಿಹೊಂದುವ ಆ್ಯಕ್ಸೆಸರೀಸ್ ಕೂಡ ತಿರಂಗಾದ್ದೇ ಆಗಿದ್ದರೆ ಈ ಉಡುಗೆ ಹೆಚ್ಚು ಸೂಕ್ತವೆನಿಸುತ್ತದೆ, ಸ್ವಾತಂತ್ರ್ಯ ಹಬ್ಬವೂ ಹೆಚ್ಚು ಅರ್ಥಪೂರ್ಣವಾಗಿರುತ್ತದೆ.

### ಡೆನಿಮ್, ಖಾದಿ ಮಿಂಚು

ರಾಷ್ಟ್ರೀಯ ಹಬ್ಬ ಅದರಲ್ಲೂ ಸ್ವಾತಂತ್ರ್ಯೋತ್ಸವಕ್ಕೂ ಖಾದಿ ಬಟ್ಟೆಗೂ ಎಲ್ಲಿಲ್ಲದ ನಂಟು. ರಾಷ್ಟ್ರಪಿತ ಬಾಪೂಜಿಯ ಅಚ್ಚುಮೆಚ್ಚಿನ ಉಡುಗೆ ಖಾದಿ ಆಗಿದ್ದು, ಈಗ ಫ್ಯಾಷನ್ ಜೊತೆಗೂ ತಳುಕು ಹಾಕಿಕೊಂಡಿದೆ. ಖಾದಿ ಅಥವಾ ಡೆನಿಮ್ ಬಟ್ಟೆಯಲ್ಲಿ ಹಸುರು ಬಣ್ಣದ ಕುರ್ತಿ, ಕೇಸರಿ ಬಣ್ಣದ ಪಲಾಜೊ ಹಾಗೂ ಬಿಳಿ ಬಣ್ಣದ ದುಪಟ್ಟಾ ಸ್ವಾತಂತ್ರ್ಯೋತ್ಸವಕ್ಕೆ ಹೇಳಿಮಾಡಿಸಿದ್ದು. ಈ ಉಡುಪಿಗೆ ಕೇಸರಿ, ಬಿಳಿ ಹಸುರು ಬಣ್ಣಗಳನ್ನೊಳಗೊಂಡ ಆ್ಯಕ್ಸೆಸರೀಸ್, ಕಿವಿಯೋಲೆ, ಸರ, ಬ್ಯಾಂಡ್, ಬ್ರೇಸ್ಲೆಟ್ ಚೆನ್ನಾಗಿ ಮ್ಯಾಚ್ ಆಗುತ್ತದೆ. ನೈಸರ್ಗಿಕ ಆಭರಣಗಳಾದ ಮಣ್ಣಿನ ಒಡವೆ ಚೆನ್ನಾಗಿ ಕಾಣಿಸುತ್ತದೆ.

ಖಾದಿ ಉಡುಗೆ ಬರೀ ಮಹಿಳೆಯರಿಗಷ್ಟೇ ಸೀಮಿತವಲ್ಲ. ಪುರುಷರು ಕೂಡ ಖಾದಿ ಪೈಜಾಮ ತೊಟ್ಟು ಸಖತ್ತಾಗಿ ಮಿಂಚಬಹುದು. ಸಣ್ಣ ಹುಡುಗರು, ಯುವಕರು ಖಾದಿ ಪೈಜಾಮ, ಜುಬ್ಬಾ ತೊಟ್ಟರೆ ಸಾಂಪ್ರದಾಯಿಕ ಲುಕ್ ಪಡೆಯಬಹುದು. ಖಾದಿ ಬಟ್ಟೆಯಿಂದ ತಯಾರಿಸಿದ ಬ್ಯಾಗ್, ಪರ್ಸ್‌ಗಳು ಕೂಡ ಮಿಕ್ಸ್ ಅಂಡ್ ಮ್ಯಾಚ್ ಮಾಡುವವರಿಗೆ ಅನುಕೂಲ. ಫ್ಯಾಷನಬಲ್ ಆಗಿ ಕಾಣಬೇಕು ಎನ್ನುವವರಿಗೂ ಸೂಕ್ತವಾದಂಥವು. ಅಲ್ಲದೆ ಖಾದಿ ಉಡುಪಿಗೆ ಕಾಲದ ಹಂಗಿಲ್ಲ. ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ ಎನ್ನುವ ಉಡುಪು ಖಾದಿ. ಖಾದಿ ಸೀರೆ, ಸಲ್ವಾರ್, ದುಪ್ಪಟ್ಟಾ, ಶಾಲು, ಪೈಜಾಮ ಎಲ್ಲವೂ ತೊಡಲು ಯೋಗ್ಯವಾದ ಉಡುಗೆಯೇ.



ಕಾಲಕ್ಕೆ ತಕ್ಕಂತೆ ನಮ್ಮ ದಿರಿಸು ಬದಲಾದರೂ ಖಾದಿ ಬಟ್ಟೆಯಲ್ಲೂ ಮಾರ್ಪಾಡು ಆಗುತ್ತಿರುತ್ತದೆ. ಗುಣಮಟ್ಟ ಮಾತ್ರ ಅದೇ ರೀತಿಯಲ್ಲಿರುತ್ತದೆ. ಹೀಗಾಗಿ ಸ್ವಾತಂತ್ರ್ಯ ದಿನಾಚರಣೆ ಮಾತ್ರವಲ್ಲದೆ ಎಲ್ಲ ರಾಷ್ಟ್ರೀಯ ಹಬ್ಬಗಳಿಗೂ ಖಾದಿ ಸೂಕ್ತವಾದ ಉಡುಪು.

### ಎಥ್ನಿಕ್ ಉಡುಪು

ಸೀರೆಗಳಲ್ಲಿ ಎಥ್ನಿಕ್ ಸೀರೆ ಇಂದಿನ ಟ್ರೆಂಡ್. ಫ್ಯಾಷನಬಲ್ ಆಗಿರುವ ತ್ರಿವರ್ಣದ ಸೀರೆಗಳು, ಒಂದೇ ಸೀರೆಯಲ್ಲಿ ಹಲವು ಬಣ್ಣಗಳಿಂದ ಕೂಡಿದವು ಇಂದಿನ ಫ್ಯಾಷನ್‌ಗೆ ತಕ್ಕಂತೆ ಧರಿಸಿದರೆ ಸಖತ್ ಲುಕ್ ಕೊಡುತ್ತದೆ. ಎಥ್ನಿಕ್ ಸೀರೆಗಳಿಗೆ ವಯೋಮಾನದ ಹಂಗಿಲ್ಲ. ಪುಟ್ಟ ಹುಡುಗಿಯಿಂದ ಹಿಡಿದು ವಯಸ್ಸಾದ ಮಹಿಳೆಯರವರೆಗೆ ಎಲ್ಲರೂ ಆರಾಮವಾಗಿ ಉಟ್ಟುಕೊಳ್ಳಬಹುದು. ಹೀಗಾಗಿ ಇಂಥ ಉಡುಪುಗಳಿಗೆ ಬೇಡಿಕೆಯೂ ಹೆಚ್ಚುತ್ತಿದೆ.

ಕೆಲವೊಂದು ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲೂ ಎಥ್ನಿಕ್ ಉಡುಗೆಗಳು ಹಬ್ಬದ ಮಹತ್ವವನ್ನು ಸಾರುವಂತಿರುತ್ತವೆ. ಸ್ವಾತಂತ್ರ್ಯ ದಿನೋತ್ಸವಕ್ಕಾಗಿ ಟ್ರೈಕಲರ್ ಅಥವಾ ಒಂದೇ ಕಲರ್‌ನ ಫ್ಲ್ಯಾಗ್‌ನ ಬಣ್ಣವನ್ನು ಒಳಗೊಂಡ ಉಡುಪು ಚೆನ್ನಾಗಿ ಕಾಣುತ್ತದೆ. ಇದರಲ್ಲಿ ಮಿಕ್ಸ್ ಅಂಡ್ ಮ್ಯಾಚ್ ಕೂಡ ಮಾಡಿಕೊಳ್ಳಬಹುದು. ಸಲ್ವಾರ್, ಅನಾರ್ಕಲಿ ಅಥವಾ ಸೀರೆಗೆ ಇದು ಚೆನ್ನಾಗಿ ಒಪ್ಪುತ್ತದೆ. ಕೇಸರಿ, ಬಿಳಿ ಹಸುರು ಬಣ್ಣಗಳನ್ನೊಳಗೊಂಡ ಡ್ರೆಸ್ ಅಥವಾ ಸೀರೆ ದೇಶಭಕ್ತಿಯನ್ನೂ ಬಿಂಬಿಸುವಂತಿರುತ್ತವೆ.

### ಕ್ರಾಪ್‌ಟಾಪ್‌ಗಳ ಕಾಲ

ಫ್ಯಾಷನ್‌ಪ್ರಿಯರು ಇನ್ನು ಸ್ವಲ್ಪ ಡಿಫರೆಂಟ್ ಆಗಿ ಕಾಣಬೇಕೆಂದರೆ ತ್ರಿವರ್ಣದ ಕ್ರಾಪ್‌ಟಾಪ್ ಧರಿಸಬಹುದು. ಇದು ಪ್ಲೆಸೆಂಟ್ ಲುಕ್ ಕೊಡುತ್ತದೆ. ಕ್ರಾಪ್‌ಟಾಪ್ ಬಿಳಿ ಬಣ್ಣದ್ದಾದರೆ ಹಸುರು ಬಣ್ಣದ ಸ್ಕರ್ಟ್ ಒಳ್ಳೆಯ ಕಾಂಬಿನೇಷನ್. ಕೇಸರಿ ಬಣ್ಣದ ರಿಬ್ಬನ್ ಅಥವಾ ಬ್ಯಾಂಡ್ ಧರಿಸಿದರೆ ಆಯಿತು.

ಫ್ಯಾಷನ್‌ನಲ್ಲೂ ಹಲವು ವೈವಿಧ್ಯದ ಉಡುಗೆಗಳು ಇದ್ದು ರಾಷ್ಟ್ರಪ್ರೇಮವನ್ನು ಬಿಂಬಿಸಲು ಸಹಕಾರಿ. ಈ ಸಲದ ಸ್ವಾತಂತ್ರ್ಯ ಅಮೃತಮಹೋತ್ಸವವನ್ನು ಫ್ಯಾಷನಬಲ್ ಉಡುಪಿನೊಂದಿಗೆ ಆಚರಿಸಿದರೆ ಈ ಹಬ್ಬ ಇನ್ನಷ್ಟು ಮಹತ್ವದ್ದಾಗಿ ಕೂಡಿರಲು ಸಾಧ್ಯ.